**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.212/2022**

| | | |
|---|---|---|
| ಸಾಕ್ಷಿದಾರರ ಹೆಸರುಃ | ಶಬರೀಶ್ ಸಿ.ಪಿ | ಡಿ ಡಬ್ಲ್ಯೂಃ 1 |
| ತಂದೆಯ ಹೆಸರುಃ | ಪುಟ್ಟಸ್ವಾಮಿಗೌಡ | |
| ವಯಸ್ಸುಃ | 41 ವರ್ಷ | |
| ಉದ್ಯೋಗಃ | ವ್ಯವಸಾಯ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಚಾಮನಹಳ್ಳಿ ಗ್ರಾಮ | **28.04.2023** |

**ಮುಖ್ಯ ವಿಚಾರಣೆಃ** ಆರೋಪಿ ಪರ ಶ್ರೀ ಕೆ.ಜಿ.ಪಿ ವಕೀಲರವರಿಂದಃ

ನಿಂಗಣ್ಣ ರಾಥೋಡ ಎನ್ನುವವರು ನಮ್ಮ ಮನೆಯ ಪಕ್ಕದಲ್ಲಿ ವಾಸ ಮಾಡುತ್ತಿರುತ್ತಾರೆ. ಸದರಿಯವರು ನನಗೆ ಪರಿಚಯ ಇರುತ್ತಾರೆ. ಸದರಿಯವರು ಸ್ವಂತ ಜೆಸಿಬಿಯನ್ನು ಹೊಂದಿದ್ದು, ನನ್ನ ಜಮೀನಿಗೆ ಕೆಲಸ ಮಾಡಲು ಬರುತ್ತಿದ್ದರು. ಆದ್ದರಿಂದ ಅವರ ಪರಿಚಯ ನನಗೆ ಇರುತ್ತದೆ. ನಮ್ಮ ಗ್ರಾಮದ ರವಿಗೌಡ ಅಂದರೆ ಈ ಪ್ರಕರಣ ಪಿರ್ಯಾದಿರವರು ನನಗೆ ಮಾವ ಆಗಬೇಕು ಹಾಗೂ ನಿಂಗಣ್ಣರವರು ರವಿರವರ ಜಮೀನಿನಲ್ಲಿ ಜೆಸಿಬಿ ಕೆಲಸಕ್ಕೆ ಹೋಗಿರುತ್ತಾರೆ. ನಿಂಗಣ್ಣ ಯಾದಗಿರಿ ಜಿಲ್ಲೆಯಿಂದ ಬಂದಿರುವ ಕಾರಣ ಆತನು ಮನೆ ಮಾಡುವ ಸಲುವಾಗಿ ರವಿರವರಿಂದ ರೂ.3 ಲಕ್ಷ ಮುಂಗಡ ಹಣವನ್ನು ಪಡೆದುಕೊಂಡಿದ್ದು, ಅದಕ್ಕೆ ನಿಂಗಣ್ಣ ಯಾವುದೇ ಜಾಮೀನು ನೀಡಿರುವುದಿಲ್ಲ. ಸುಮಾರು 8 ದಿನಗಳ ನಂತರ ರವಿ ಮತ್ತು ನಿಂಗಣ್ಣರವರ ನಡುವೆ ಮನಸ್ತಾಪ ಆಗಿರುತ್ತದೆ. ಸದರಿ ವಿಚಾರವನ್ನು ರವಿರವರು ನನಗೆ ತಿಳಿಸಿರುತ್ತಾರೆ ಹಾಗೂ ಸದರಿಯವರು ನಿಂಗಣ್ಣ ಅವರ ತೋಟದಲ್ಲಿಯೇ ಕೆಲಸ ಮಾಡಬೇಕು ಎಂದು ಹೇಳಿರುತ್ತಾರೆ ಹಾಗೂ ರವಿರವರು ನಿಂಗಣ್ಣರವರಿಗೆ ಹಣ ನೀಡಿರುವ ಕಾರಣ ಜೆಸಿಬಿ ಕೆಲಸದ ಬಾಬ್ತು ಹಣವನ್ನು ನೀಡುವುದಿಲ್ಲ ಎಂದು ಹೇಳಿರುತ್ತಾರೆ. ನಿಂಗಣ್ಣರವರು ನನ್ನ ಬಳಿ ಬಂದು ರವಿರವರು ಜೆಸಿಬಿ ಕೆಲಸ ಮಾಡಿಸಿಕೊಂಡರೂ ಸಹ ಹಣ ನೀಡಿರುವುದಿಲ್ಲ ಎಂದು ನನಗೆ ಹೇಳಿರುತ್ತಾರೆ. ನಾನು ಅವರಿಗೆ ಮುಂಗಡ ಹಣದಲ್ಲಿಯೇ ಹಣವನ್ನು ಕಟಾವು ಮಾಡಿಕೊಳ್ಳಲು ಹೇಳಿರುತ್ತೇನೆ. ಅದಕ್ಕೆ ರವಿರವರು ಒಪ್ಪಿರುವುದಿಲ್ಲ. ಅವರು ನೀಡಿರುವ ಮುಂಗಡ ಹಣವನ್ನು ವಾಪಸ ಕೊಡಲು ಕೇಳಿರುತ್ತಾರೆ. ನಿಂಗಣ್ಣರವರು

ತಮ್ಮ ಬಳಿ ಅಷ್ಟು ಹಣ ಇರುವುದಿಲ್ಲ ಎಂದು ಹೇಳಿರುತ್ತಾರೆ. ನಾನು ಸದರಿಯವರಿಗೆ 2-3 ದಿನಗಳ ಸಮಯ ಕೇಳಿರುತ್ತೇನೆ. ಪಿರ್ಯಾದುದಾರರು ನಿಂಗಣ್ಣರವರಿಂದ ಒಂದು ಚೆಕ್ಕನ್ನು ಕೊಡಿಸಿ ಕೊಡಲು ಹೇಳಿರುತ್ತಾರೆ. ರವಿರವರು ನಿಂಗಣ್ಣ ರವರ ಯಾದಗಿರಿ ಜಿಲ್ಲೆಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ಚೆಕ್ಕನ್ನು ಪಡೆಯುತ್ತಿರುವುದಿಲ್ಲ ಎಂದು ನಿಂಗಣ್ಣ ನನಗೆ ಹೇಳಿರುತ್ತಾರೆ. ನಾನು ಹಾಗೂ ನಿಂಗಣ್ಣ ಜೊತೆಯಾಗಿ ಹೋಗಿ ರವಿರೊಂದಿಗೆ ಮಾತನಾಡಿರುತ್ತೇವೆ. ಆ ಸಮಯದಲ್ಲಿ ರವಿರವರು ಸ್ಥಳೀಯ ವ್ಯಕ್ತಿಯ ಚೆಕ್ಕು ಕೊಡಿಸಿ ಕೊಡಲು ನನಗೆ ಹೇಳಿರುತ್ತಾರೆ. ಆಗ ನಾನು ರವಿರವರಿಗೆ ಬರವಣಿಗೆ ಇಲ್ಲದ ಸಹಿ ಮಾಡಿದ 2 ಖಾಲಿ ಚೆಕ್ಕುಗಳನ್ನು ನೀಡಿರುತ್ತೇನೆ. 1 ತಿಂಗಳ ನಂತರ ಅಂದರೆ ದಿನಾಂಕ 23.10.2022 ರಂದು ರವಿರವರು ನಿಂಗಣ್ಣರವರ ಜೆಸಿಬಿಯನ್ನು ಕೆಲಸಕ್ಕೆ ಕರೆಸಿಕೊಂಡಿರುತ್ತಾರೆ. ಆಗಲೂ ಸಹ ರವಿರವರು ಕೆಲಸ ಮಾಡಿಸಿಕೊಂಡು ಹಣವನ್ನು ನೀಡಿರುವುದಿಲ್ಲ. ನಿಂಗಣ್ಣರವರು ಸದರಿ ವಿಚಾರವನ್ನು ನನಗೆ ತಿಳಿಸಿರುತ್ತಾರೆ. ರವಿರವರು ನಿಂಗಣ್ಣರವರಿಗೆ ಅವರು ಕೊಟ್ಟ ಹಣವನ್ನು ವಾಪಸ ಕೊಟ್ಟು ಹೋಗಲು ಹೇಳಿರುತ್ತಾರೆ ಹಾಗೂ ನಿಂಗಣ್ಣರವರ ಜೆಸಿಬಿಯ ಚಕ್ರಗಳ ಗಾಳಿಯನ್ನು ಬಿಟ್ಟಿರುತ್ತಾರೆ. ನಾನು ಹಾಗೂ ನಿಂಗಣ್ಣರವರೊಂದಿಗೆ ಮಾತನಾಡಿದ್ದರೂ ಸಹ ಅವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

ಈ ಬಗ್ಗೆ ನಿಂಗಣ್ಣ ಮತ್ತು ಅವರ ಅತ್ತೆ ಬಸಮ್ಮಣಿರವರು ಬನ್ನೂರು ಪೊಲೀಸ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಪೊಲೀಸರು ರವಿರವರನ್ನು ಪೊಲೀಸ ಠಾಣೆಗೆ ಕರೆಸಿರುತ್ತಾರೆ. ಅಲ್ಲಿ ನಡೆದ ವಿಚಾರವನ್ನು ತಿಳಿಸಿದ ನಂತರ ವಿಚಾರಣೆ ಮಾಡಿ ರವಿರವರಿಗೆ ರೂ.3,55,000/- ಹಣ ನೀಡುವಂತೆ ಪೊಲೀಸರು ಹೇಳಿರುತ್ತಾರೆ. ಸದರಿ ಹಣವನ್ನು ನಿಂಗಣ್ಣರವರ ಅತ್ತೆ ಬಸಮ್ಮಣಿರವರು ಕೊಡುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ಆ ಸಮಯದಲ್ಲಿ ಬಸಮ್ಮಣಿರವರು ದಿನಾಂಕ 15.11.2022 ರ ರೂ.2,05,000/- ಮೊತ್ತದ ಚೆಕ್ ಹಾಗೂ ದಿನಾಂಕ 25.11.2022 ರ ರೂ.1,50,000/- ಮೊತ್ತದ ಚೆಕ್ ಅಂದರೆ ಒಟ್ಟು 2 ಚೆಕ್ಕುಗಳನ್ನು ಬಸಮ್ಮಣಿರವರಿಗೆ ನೀಡಿರುತ್ತಾರೆ. ದಿನಾಂಕ 25.11.2022 ರಂದು ರವಿರವರಿಗೆ ಕೊಡಬೇಕಾದ ಬಾಬ್ತು ರೂ.2,05,000/- ಹಣವನ್ನು ಕೊಡಿಸಿಕೊಡುವ ಸಲುವಾಗಿ ಪೊಲೀಸರು ರವಿರವರಿಗೆ ದೂರವಾಣಿ ಕರೆ ಮಾಡಿರುತ್ತಾರೆ, ಆದರೆ ರವಿರವರು ನಾವು ಮಾಡಿದ ದೂರವಾಣಿ ಕರೆ ಅಥವಾ ಪೊಲೀಸರು ಮಾಡಿದ ದೂರವಾಣಿ ಕರೆಗೆ

ಸ್ಪಂದಿಸಿರುವುದಿಲ್ಲ. ರವಿರವರು ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳುವುದಾಗಿ ನಾವು ಪೊಲೀಸರಿಗೆ ತಿಳಿಸಿರುತ್ತೇವೆ. ನಾನು ನೀಡಿದ್ದ 2 ಚೆಕ್ ಗಳ ಪೈಕಿ ರವಿ ರೂ.5 ಲಕ್ಷ ಮೊತ್ತಕ್ಕೆ ಒಂದು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ಮತ್ತೊಂದು ಚೆಕ್ ಈಗಲೂ ಸಹ ರವಿರವರ ಬಳಿ ಇರುತ್ತದೆ. ಪಿರ್ಯಾದುದಾರರು ನಿಂಗಣ್ಣರವರ ವಿರುದ್ಧ ರೂ.5 ಲಕ್ಷ ಮೊತ್ತಕ್ಕೆ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ಬಸಮ್ಮಣಿರವರು ನೀಡಿದ್ದ ರೂ.2,05,000/- ಮೊತ್ತದ ಚೆಕ್ಕನ್ನು ಸಹ ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ಸದರಿ ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸಿದ ಬಾಬ್ತು ನಾವು ರವಿರವರನ್ನು ಭೇಟಿ ಮಾಡಿರುತ್ತೇವೆ. ಆ ಸಮಯದಲ್ಲಿ ರವಿರವರು ರೂ.15 ಲಕ್ಷ ಕೊಡಬೇಕೆಂದು ಹಾಗೂ ರೂ.20 ಲಕ್ಷ ಕೊಡಬೇಕೆಂದು ಹೇಳಿರುತ್ತಾರೆ. ನಾವು ಪೊಲೀಸ ಠಾಣೆಯಲ್ಲಿ ತೀರ್ಮಾನವಾದಂತೆ ನಿಂಗಣ್ಣರವರು ಈಗಲೂ ಸಹ ರೂ.3,55,000/- ಹಣ ರವಿರವರಿಗೆ ನೀಡಲು ಸಿದ್ಧರಿರುತ್ತಾರೆ. ಅದಕ್ಕೆ ಪಿರ್ಯಾದುದಾರರು ಬಸಮ್ಮಣಿರವರಿಗೆ ಸೇರಿದ 2 ಚೆಕ್ಕುಗಳು, ನನಗೆ ಸೇರಿದ 2 ಚೆಕ್ಕುಗಳು ಹಾಗೂ ನಿಂಗಣ್ಣರವರಿಗೆ 1 ಚೆಕ್ಕು ವಾಪಸ ಕೊಡಬೇಕಾಗಿರುತ್ತದೆ.

ಪಿರ್ಯಾದುದಾರರ ನೀಡಿದ ನೋಟಿಸಿಗೆ ನಾನು ನನ್ನ ವಕೀಲರ ಮುಖಾಂತರ ಪ್ರತ್ಯುತ್ತರ ನೋಟಿಸ ನೀಡಿರುತ್ತೇನೆ. ಸಾಕ್ಷಿಯು ದಿನಾಂಕ 27.01.2022 ರ ಪ್ರತ್ಯುತ್ತರ ನೋಟಿಸನನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ-1** ಎಂದು, ಅಂಚೆ ರಸೀದಿಯನ್ನು **ನಿಡಿ-2** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ಶ್ರೀ **ಎಚ್.ಆರ್.ಎಸ್** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**